**ಜಿಲ್ಲಾ ಪಂಚಾಯತ್, ಉಡುಪಿ**

**ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ರಜತಾದ್ರಿ ಸಿ ಬ್ಲಾಕ್ ಮಣಿಪಾಲ ಉಡುಪಿ ಜಿಲ್ಲೆ**

ದೂರವಾಣಿ ಸಂಖ್ಯೆ : 0820 – 2574878 e-mail ID :ddpi.edu.karudup@nic.in

ಸಂ:ಡಿ3/ಪ್ರ.ಅ.ಸಾ.ದಾ.ವ.ತೆ.ಪ್ರ/2017-18 ದಿನಾಂಕ: 15-07-2017

ಜ್ಞಾಪನ

ವಿಷಯ: ಸರಕಾರಿ ಮತ್ತುಅನುದಾನಿತ ಪ್ರೌಢ ಶಾಲೆಗಳ ಪ್ರಯೋಗಾಲಯಗಳಲ್ಲಿರುವ ಹಾಳಾದ ಅನುಪಯುಕ್ತ ಪರಿಕರಗಳನ್ನು ದಾಸ್ತಾನಿನಿಂದ ತೆಗೆದು ಹಾಕಲು ಪ್ರಸ್ತಾವನೆ ಸಲ್ಲಿಸುವ ಬಗ್ಗೆ

ಉಲ್ಲೇಖ: ಶಾಲಾ ಭೇಟಿ ವರದಿ

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಶಾಲಾ ಭೇಟಿ ಸಂದರ್ಭಗಳಲ್ಲಿ ಸರಕಾರಿ ಮತ್ತುಅನುದಾನಿತ ಪ್ರೌಢ ಶಾಲೆಗಳ ಪ್ರಯೋಗಾಲಯಗಳನ್ನು ವೀಕ್ಷಿಸಿದಾಗ ಹಾಳಾದ ಅನುಪಯುಕ್ತ ಪರಿಕರಗಳು ಮತ್ತುಒಡೆದು ಹೋದ ಗಾಜಿನ ಉಪಕರಣಗಳು ಹಾಗೂ ರಾಸಾಯನಿಕಗಳು ಕವಾಟು ಹಾಗೂ ಪ್ರಯೋಗಾಲಯದಲ್ಲಿ ಹರಡಿಕೊಂಡಿರುವುದು ಕಂಡು ಬಂದಿರುತ್ತದೆ. ಇವುಗಳನ್ನು ದಾಸ್ತಾನಿಂದ ನಿಯಮಾನುಸಾರ ತೆಗೆದು ಹಾಕುವ ಪ್ರಕ್ರಿಯೆ ಹಲವು ವರ್ಷಗಳಿಂದ ನಡೆಸದಿರುವುದುಕಂಡು ಬಂದಿರುತ್ತದೆ. **ಆದ್ದರಿಂದ ಸರಕಾರಿ ಮತ್ತುಅನುದಾನಿತ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರು ತಕ್ಷಣ ಈ ಬಗ್ಗೆ ಕ್ರಮ ವಹಿಸುವುದು.ರೂ25000/- ಮೀರದಂತೆ ದಾಸ್ತಾನಿನಿಂದ ತೆಗೆದು ಹಾಕಬೇಕಾದ ಸಾಮಗ್ರಿಗಳ (ಒಡೆದುಹೋದ ವಸ್ತುಗಳು, ರಾಸಾಯನಿಕಗಳು ಮತ್ತು ಖರ್ಚಾಗುವ ವಸ್ತುಗಳನ್ನು ಹೊರತು ಪಡಿಸಿ) ಪಟ್ಟಿಯನ್ನು ಪ್ರಯೋಗಾಲಯದ ಪ್ರಭಾರ ವಹಿಸಿಕೊಂಡ ಶಿಕ್ಷಕರಿಂದ ಪಡೆದು ದಿನಾಂಕ 31/08/2017ರೊಳಗೆ ದಾಸ್ತಾನಿನಿಂದ ತೆಗೆದು ಹಾಕಲು ದ್ವಿ ಪ್ರತಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು. ಈ ಕ್ರಮವನ್ನು ಪ್ರತಿ ವರ್ಷ ನಡೆಸಿ ಪ್ರಯೋಗಾಲದ ಸ್ವಚ್ಛತೆ ಹಾಗೂ ನಿರ್ವಹಣೆ ಬಗ್ಗೆ ಗಮನ ವಹಿಸುವುದು.** ಪ್ರಯೋಗಾಲಯದ ಪ್ರಭಾರ ವಹಿಸಿಕೊಂಡ ಶಿಕ್ಷಕರಿಗೆ ದಾಸ್ತಾನಿನಿಂದ ತೆಗೆದು ಹಾಕಬೇಕಾದ ಸಾಮಗ್ರಿಗಳ ಪಟ್ಟಿ ತಯಾರಿಸಲು ಹಾಗೂ ಪ್ರಯೋಗಾಲಯದ ನಿರ್ವಹಣೆಗೆ ಶಾಲಾ ಇತರ ವಿಜ್ಞಾನ ಶಿಕ್ಷಕರು ಸಹಕರಿಸುವಂತೆ ನೋಡಿಕೊಳ್ಳುವುದು. ದಾಸ್ತಾನಿನಿಂದ ತೆಗೆದು ಹಾಕಬೇಕಾದ ಸಾಮಗ್ರಿಗಳ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಸೂಚನೆಗಳು ಹಾಗೂ ನಮೂನೆಗಳನ್ನು ಈ ಪತ್ರದೊಂದಿಗೆ ಲಗತ್ತೀಕರಿಸಿದೆ.

ಉಪನಿರ್ದೇಶಕರು(ಆಡಳಿತ)
ಉಪನಿರ್ದೇಶಕರಕಛೇರಿ
ಸಾ.ಶಿ.ಇಲಾಖೆ,ಉಡುಪಿ

ರಿಗೆ,

1. ಉಡುಪಿ ಜಿಲ್ಲೆಯ ಎಲ್ಲಾ ಸರಕಾರಿ ಹಾಗೂ ಅನುದಾನಿತ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರು

ಪ್ರತಿಯನ್ನು :-

1. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ.

**ದಾಸ್ತಾನಿನಿಂದತೆಗೆದು ಹಾಕಬೇಕಾದ ಸಾಮಗ್ರಿಗಳ ಪಟ್ಟಿತಯಾರಿಸಲು ಈ ಕೆಳಗಿನ ಸೂಚನೆಗಳನ್ನು ನೀಡಲಾಗಿದೆ.**

1. ಪಟ್ಟಿಯಲ್ಲಿ ಮೊದಲು ಖರೀದಿಸಿದ ಸಾಮಗ್ರಿಗಳು ಹಾಳಾಗಿದ್ದಲ್ಲಿ ಮೊದಲ ಆದ್ಯತೆ ನೀಡುವುದು.

2.ಗಾಜಿನ ಸಾಮಗ್ರಿಗಳನ್ನು ಬಳಸುವಾಗ ಎಚ್ಚರಿಕೆ ವಹಿಸುವುದು. ಒಡೆದಲ್ಲಿ ಶಾಲಾ ಹಂತದಲ್ಲೆಯೇ ದಾಸ್ತಾನಿನಿಂದ ತೆಗೆದು ಹಾಕುಲು ಕ್ರಮ ವಹಿಸುವುದು.ಯಾವುದೇ ಕಾರಣಕ್ಕೂ ದಾಸ್ತಾನಿನಿಂದ ತೆಗೆದು ಹಾಕುವ ಪಟ್ಟಿಗೆ ಸೇರಿಸಬಾರದು.

3. ಬಹು ಹಿಂದೆ ಖರೀದಿಸಿದ ಹಾಳಾದ, ಲೇಬಲ್ ಇಲ್ಲದ ರಾಸಾಯನಿಕಗಳನ್ನು ಬೇರ್ಪಡಸುವುದು.ಆಮ್ಲಗಳನ್ನು ತಟಸ್ಥಗೋಳಿಸಿ ಅಧಿಕ ಪ್ರಮಾಣದ ನೀರಿನೊಂದಿಗೆ ನೀರಿನ ಮೂಲಗಳಿಂದ ದೂರ ಹೊಂಡದಲ್ಲಿ ಹಾಕುವುದು.ನೀರಿನ ಮೂಲಗಳಿಂದ ದೂರದಲ್ಲಿ ಹೊಂಡ ತೋಡಿ ಘನ ರಾಸಾಯನಿಕಗಳನ್ನು ಹಾಕಿ ಮಣ್ಣಿನಿಂದ ಮುಚ್ಚುವುದು. ಭಾರ ಲೋಹಗಳ ಸಂಯುಕ್ತಗಳು ಇದ್ದಲ್ಲಿ ಅವುಗಳು ಪರಿಸರ ಸೇರದಂತೆ ಎಚ್ಚರಿಕೆ ವಹಿಸುವುದು. ಮತ್ತು ಅವುಗಳನ್ನು ಪ್ರತ್ಯೇಕವಾಗಿ ತೆಗೆದಿರಿಸುವುದು. ಯಾವುದೇ ಕಾರಣಕ್ಕೂ ದಾಸ್ತಾನಿನಿಂದ ತೆಗೆದು ಹಾಕುವ ಪಟ್ಟಿಗೆರಾಸಾಯನಿಕಗಳನ್ನು ಸೇರಿಸ ಬಾರದು. ಖಾಲಿಯಾದ ರಸಾಯನಿಕಗಳನ್ನು ಅಗತ್ಯವಿದ್ದಲ್ಲಿ ಪುನಃ ಖರೀದಿಸುವುದು.

4. ರಾಸಾಯನಿಕಗಳು, ಗಾಜಿನ ಪರಿಕರಗಳು ಮತ್ತು ಇತರ ಉಪಯೋಗಿಸಿದಾಗ ಖಾಲಿಯಾಗುವ ವಸ್ತುಗಳಿಗೆ ಪ್ರತ್ಯೇಕ ವಹಿಯನ್ನು ನಿರ್ವಹಿಸುವುದು.

5. ಚಾರ್ಟುಗಳು ಹಾಳಾಗಿದ್ದಲ್ಲಿ ದಾಸ್ತಾನಿನಿಂದ ತೆಗೆದು ಹಾಕಬೇಕಾದ ಸಾಮಗ್ರಿಗಳ ಪಟ್ಟಿಗೆ ಸೇರಿಸುವುದು.

ಉಪನಿರ್ದೇಶಕರು(ಆಡಳಿತ)
ಉಪನಿರ್ದೇಶಕರಕಛೇರಿ
ಸಾ.ಶಿ.ಇಲಾಖೆ,ಉಡುಪಿ